ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.2376/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ರಹೀಂ ಪಟೇಲ್** | | |
| **ತಂದೆಃಹೆಸರು** | **ಮೋಹಿನ್ ಪಟೇಲ್** | **ಪಿಡಬ್ಲೂಃ** | **4** |
| **ವಯಸ್ಸು** | **33 ವರ್ಷ** | **ಸಿಡಬ್ಲೂಃ** | **5** |
| **ಉದ್ಯೋಗಃ** | **ಖಾಸಗಿ ಕೆಲಸ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 11-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ತಮ್ಮ, ಚಾಸಾ-4 ನನ್ನ ತಾಯಿ, ಚಾಸಾ-2 ನನ್ನ ಸ್ನೇಹಿತ, ಚಾಸಾ-6 ನನ್ನ ಚಿಕ್ಕಪ್ಪ. ಆರೋಪಿತರು ನನ್ನ ಸಂಬಂಧಿಕರು.

ಇಂದಿರಾ ನಗರದಲ್ಲಿರುವ ನನ್ನ ಅಜ್ಜ ಖಾಸಿಂ ಪಟೇಲ್ ಮನೆಯ ಮುಂದೆ ಚಾಸಾ-1 ರವರು ನಿಂತಿದ್ದಾಗ, 1ನೇ ಆರೋಪಿ ಹಿಂದಿನಿಂದ ಚಾಸಾ-1 ರವರ ತೊಡೆಯ ಭಾಗಕ್ಕೆ ಚಾಕು ಹಾಕಿದ್ದನು. ಈಗ ಒಂದೂವರೆ ವರ್ಷಗಳ ಹಿಂದೆ ಬೆ. 11 ರಿಂದ 11-30 ರ ಸುಮಾರಿಗೆ ಘಟನೆ ಆಗಿತ್ತು. ಆಗ ನಾನು ಅಲ್ಲಿಯೇ ಇದ್ದೆನು. ನನಗೆ ಇಷ್ಟೇ ಗೊತ್ತು. ಈ ಬಗ್ಗೆ ನನಗೆ ಪೋಲೀಸರು ವಿಚಾರಣೆ ಮಾಡಿದ್ದರು.

ನಂತರ ಚಾಸಾ-1 ರವರನ್ನು ಸಿ.ಸ. ಆಸ್ಪತ್ರೆಗೆ ನಾನೇ ಕರೆದುಕೊಂಡು ಹೋಗಿದ್ದೆನು.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು. ಮಾ. 1 ನ್ನು ತೋರಿಸಿ, ಸಾಕ್ಷಿಯು ಅದನ್ನು ನೋಡಿ ಆ ಚಾಕು ಇದಲ್ಲ, ಅದು ಮಡಚುವಂತಹ ಚಾಕು ಇತ್ತು, ಅದರಿಂದ ಚಾಸಾ-1 ರವರಿಗೆ ಗಾಯವಾಗಿತ್ತು ಎನ್ನುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ನಿಮ್ಮ ಮತ್ತು ಆರೋಪಿತರ ನಡುವೆ ಆಸ್ತಿಯ ವಿಷಯವಾಗಿ ಕೇಸುಗಳು ಇತ್ತು, ಇಬ್ಬರೂ ಒಬ್ಬರ ಮೇಲೆ ಒಬ್ಬರು ಸಿವಿಲ್ ದಾವೆಗಳು ಹೂಡಿದ್ದೀರಿ ಎಂದು ಪೋಲೀಸರಿಗೆ ಹೇಳಿಕೆಯಲ್ಲಿ ಹೇಳಿದ್ದೀರಿ ಎಂದರೆ ಸರಿ. ದಿ.15-07-2023 ರಂದು ಬೆ.9-35 ಕ್ಕೆ ನೀವು & ನಿಮ್ಮ ತಮ್ಮ ಮನೆಯ ಕಡೆಗೆ ಹೋಗುವಾಗ ಆರೋಪಿತರು ಚಾಸಾ-1 & 4 ರವರಿಗೆ ಹೊಡೆ ಬಡೆ ಮಾಡುತ್ತಿದ್ದರು, ಆಗ ನಾವು ಅಲ್ಲಿಗೆ ಹೋದಾಗ ಚಾಸ-7 ಕೂಡ ಅಲ್ಲಿಗೆ ಬಂದು ಜಗಳ ಬಿಡಿಸಿದೆವು. ಆರೋಪಿತರು ಹೋಗುವಾಗ ನಮ್ಮನ್ನು ನೋಡುತ್ತಾ, ಲೇ ಇವತ್ತು ಉಳಿದುಕೊಂಡಿದ್ದೀಯ, ಇನ್ನೊಮ್ಮೆ ನಿನ್ನನ್ನು ಉಳಿಸುವುದಿಲ್ಲ ಎಂದು ಹೇಳಿದ್ದರು, ನಂತರ ಚಾಸಾ-1 ರವರನ್ನು ವಿಚಾರಿಸಲು ಚಾಸಾ-1 ರವರು ನನಗೆ ತಿಳಿಸಿದ್ದೇನೆಂದರೆ ಅದೇ ದಿನ ಬೆ. 9-15 ಕ್ಕೆ ಚಾಸಾ-1 ತಮ್ಮ ಮನೆಯ ಬಳಿ ನಿಂತುಕೊಂಡಿದ್ದಾಗ, ಆರೋಪಿತರು ಆತನ ಹತ್ತಿರ ಬಂದು ನೀನು ಕೊಟ್ಟ ಕೇಸ್ ವಾಪಾಸ್ ತೆಗೆದುಕೊಳ್ಳುತ್ತೀಯಾ ಇಲ್ಲ ಸೂಳೆ ಮಗನೆ ಎಂದು ಜಗಳ ತೆಗೆದಿದ್ದು, ಆತ ಹಿರಿಯರ ಸಮಕ್ಷಮ ಬಗೆಹರಿಸಿಕೊಳ್ಳೋಣ ಎಂದು ಹೇಳಿದಾಗ, ಆರೋಪಿತರು ನಮ್ಮ ಮುಂದೆಯೇ ಮಾತನಾಡುತ್ತೀಯೇನಲೇ ಎಂದು ಕೈ ಹಿಡಿದು ಹೊಡೆ ಬಡೆ ಮಾಡಿದ್ದರು, ಆಗ 1 ನೇ ಆರೋಪಿ ಒಮ್ಮೆಲೆ ತನ್ನಲ್ಲಿದ್ದ ಸಣ್ಣ ಚಾಕು ಮು. ಮಾ. 1 ರಿಂದ ಆತನ ಎಡತೊಡೆಗೆ ಹಿಂದೆ ಚುಚ್ಚಿ ಗಾಯಗೊಳಿಸಿದನು, ಆಗ ಆ ಜಗಳವನ್ನು ಚಾಸಾ-4 ರವರು ಬಿಡಿಸಿಕೊಳ್ಳಲು ಬಂದಾಗ 1 ನೇ ಆರೋಪಿತರು ಚಾಸಾ-4 ರವರಿಗೆ ಬಲಗೈ ಹಿಡಿದು ಎಳೆದಾಡಿ ಅವಮಾನ ಮಾಡಿದ್ದನು, 2 ನೇ ಆರೋಪಿಯು ಚಾಸಾ-4 ರವರ ಕೂದಲು ಹಿಡಿದು ಎಳೆದಾಡಿ ಕೈಯಿಂದ ಹೊಡೆ ಬಡೆ ಮಾಡಿದ್ದರು, ಆಗ ನೀವು ಬಿಡಿಸಿಕೊಂಡಿದ್ದೀರಿ ಎಂದು ತಿಳಿಸಿದನು, ಆಗ ನಾವು ಚಾಸಾ-1 & 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ.

ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಆರೋಪಿತರು ಕೃತ್ಯಕ್ಕೆ ಬಳಸಿದ ಚಾಕುವನ್ನು ನೋಡಿದ್ದರೂ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>

1. ಆರೋಪಿತರು ಚಾಸಾ-1 ರವರೊಂದಿಗೆ ಜಗಳ ಮಾಡಿಲ್ಲ, ಚಾಕುವಿನಿಂದ ಚುಚ್ಚಿ ಗಾಯಗೊಳಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಜಗಳ ನೋಡಿಲ್ಲ & ಬಿಡಿಸಿಲ್ಲ, ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**